# Gamaka Lessons

**Smt Gangamma Keshavamurthy**
President Gamaka Kala Parishat, Karnataka

## Navarasa Audio lesson (click here or on padyas to listen and practice)

ಶೋಕರಸದೊಂದಿಗೆ ಅಸ್ತಮಾನದ ರಚನೆ ಕವಿಚಕ್ರವರ್ತಿ ರನ್ನನದು.

ಶ್ಲೇಶಾಲಂಕಾರ; ರೂಪಕ ಸಹೋಕ್ತಿ ಇಲ್ಲಿನ ಅಲಂಕಾರ ಸೌಂದರ್ಯ; ನಾದಬಿಂದು; ಭಾವಸಿಂಧು; ಅರ್ಥಗಾಂಭೀರ್ಯಾದಿಗಳು ಕುರುಕುಲಾರ್ಕನ ದುರಂತ ಚಿತ್ರಕ್ಕೆಕನ್ನಡಿ ಹಿಡಿದಂತಿದೆ. ದಿನಪತಿಯೂ-ಕುರುಪತಿಯೂ ಏಕಕಾಲದಲ್ಲಿ ಅಸ್ತಮಿಸಿದರು. ಬಹು ಮನೋಜ್ಞವಾಗಿ ಶ್ರೀಕವಿರನ್ನ ಚಿತ್ರಿಸಿದ್ದಾನೆ. ಕುರುಕುಲಾರ್ಕನನ್ನು ಅರ್ಕನನ್ನೂ ಸರಿ ಗದ್ದುಗೆಯಲ್ಲಿ ಕುಳ್ಳಿರಿಸಿದ್ದಾನೆ. ದುರ್ಯೋಧನನ ಮಕುಟೋರಭಂಗಗಳಾದರೇನು? ತನ್ನ ಮೆಚ್ಚುಗೆಯ ನವ್ಯ ಮಕುಟವನ್ನು ಸಮರ್ಪಿಸಿ ಕೃತಾರ್ಥನಾಗಿದ್ದಾನೆ ಕವಿರನ್ನ.

ಇದಕ್ಕೆ ರಾಗ ಸಂಧ್ಯಾಕಾಲವಾಗಿರುವುದರಿಂದ ಪೂರ್ವಿಕಲ್ಯಾಣಿ ಜೊತೆಗೆ ಕರುಣಾರಸ ಹಾಡುಗಾರಿಕೆ.

ಪಂಕಜಮುಂ ಸುಹುತ್ವದನ  ಪಂಕಜಮುಂ ಮುಗಿವನ್ನಂ ಉಗ್ರತೇಜಂಕಿಡುತಿರ್ಪಿನಂ ನಿಜ ಕರಂಗಳಂ ಅಂದು
ಉಡುಗುತ್ತುಂ ಇರ್ದು
ಚಕ್ರಾಂಕಂ ಅಗಲ್ವಿನಂ ಕ್ರಮದಿಂ ಅಂಬರಮಂ ಬಿಸುಟು ಉರ್ವಿಗೆ ಅಂಧಕಾರಂಕವಿತರ್ಪಿನಂ ಕುರುಕುಲಾರ್ಕನುಂ
ಅರ್ಕನುಂ ಅಸ್ತುಂಐದಿದರ್

ಭಾರತವು ಧರ್ಮ ಮತ್ತು ಸಂಸ್ಕೃತಿ ಗಳಿಗೆ ಹೆಸರಾದ ನಾಡು. ಇವೇ ಈ ಜನರ ಉಸಿರಾಗಿದೆ. ನಮ್ಮ ಪೂರ್ವಜರು ಕಲಾಮಯ ಜೀವನವನ್ನು ನಡೆಸಿದವರು. 32ವಿದ್ಯೆಗಳಲ್ಲಿ 64 ಕೆಲಸಗಳಲ್ಲಿ ಗಮಕ ಕಲೆಯು ಒಂದು. ಗಮಕ ಕಲೆಯ ತತ್ವ ಮತ್ತು ಲಕ್ಷಣಗಳನ್ನು ತಿಳಿಸಿರುವ ಏಕಮೇವಾದ್ವಿತೀಯವಾಗಿರುವಂಥ "ಕಾವ್ಯಗಾಯನ ಕಲಾ ಸಂಗ್ರಹ" ಮತ್ತು "ಗಮಕ" ಎಂಬ ಕಂದಪದ್ಯಗಳ ಶತಕ ಕೃತಿಗಳು ದಿ|ಶ್ರೀ ರಾಘವೇಂದ್ರರಾಯರಿಂದ ರಚಿತವಾಗಿರುವಂಥ ಶಾಸ್ತ್ರ ಗ್ರಂಥಗಳು. ಗಮಕ ಕ್ಷೇತ್ರದ ಮೈಲಿಗಲ್ಲು ಎನಿಸಿವೆ ಈ ಗ್ರಂಥಗಳು.

ಸಂಗೀತದಲ್ಲಿರುವಂತೆಯೇ, ಸಾಹಿತ್ಯದಲ್ಲೂ  ದಶವಿಧಗಮಕಗಳಿವೆ. ಪದಗಳ ಏರಿಳಿತ ಮಂದ ತೀವ್ರ ವಿಷಮಗತಿ ಬೀಸು ಬಿರುಸು ಪದಗಳ ಕುಣಿತ ಪದಕಂಪನ ಪದಗಳಸುತ್ತು ಸುಳುಹು ಹೀಗೆ. ಇವುಗಳ ಸೂಕ್ಷ್ಮ ಪರಿಚಯ ಮಾಡುವ ಸಾಹಸ ಈ ವಾಚನ. ಪದಭಾವ ರಾಗಭಾವವೇ ಅತಿಮುಖ್ಯ, ಇದನ್ನೇ ಸರ್ವಾಂಗ ಸುಂದರ ಎನ್ನುವುದು. ಅಕ್ಕರಕ್ಕರದ ನೆಲೆ-ಬೆಲೆಯರಿತು ಅದನ್ನು ವ್ಯಕ್ತೀಕರಿಸುವುದೇ ಗಮಕಿಯ ಗಮಕ. ಕಾವ್ಯಗಳನ್ನು, ಓದಿದಾಗ, ಹಾಡಿದಾಗ, ಉಂಟಾಗುವ ಅನಿರ್ವಚನೀಯದ ಆನಂದದ ಅನುಭೂತಿಯೇ "ರಸ". "ರಸ"ಎಂಬುವುದು ಅನುಭವಕ್ಕೆ ವೇದ್ಯವಾಗುವಂತಹದ್ದು. "ರಸವು" ಆನಂದ ಸ್ವರೂಪವಾದದ್ದು.

ಶೃಂಗಾರಂ  ಕ್ಷಿತಿನಂದಿನೀ ವಿಹರಣೇ
ವೀರಂ ಧನುರ್ಭಂಜನೇ
ಕಾರುಣ್ಯಂ ಬಲಿಭುರ್ಜಬ್ಲುಖೇ
ಅದ್ಭುತ ರಸೌ ಸಿಂಧೌಗಿರಿ ಸ್ಥಾಪನೇ
ಹಾಸ್ಯಂ ಶೂರ್ಪನಖಾಮುಖೇ
ಭಯಾವಹೇ ಭೀಭತ್ಸಂಆಜೀರ್ಮುಖೇ
ರೌದ್ರಂರಾವಣಮರ್ದನೇ
ಮುನಿಜನೇ ಶಾಂತಂವಪುಃ

ನವರಸಗಳಲ್ಲಿ ಶೃಂಗಾರ ರಸವು ರಸಗಳ ರಾಜ. ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ವನವಿಹಾರ-ಸರಸ ಸಲ್ಲಾಪ-ವಸಂತ ವರ್ಣನೆ ಇತ್ಯಾದಿ ಶೃಂಗಾರ ರಸವನ್ನು ಸಂಕೇತಿಸುವುದು ಈ ರಸದ ವೈಶಿಷ್ಟ. ಉದಾಹರಣೆಗೆ, ಜಾವಳಿಗಳು. ಅವುಗಳು ಹೆಚ್ಚಾಗಿ ಬೇಹಾಗ್, ಕಾಪಿ ಮತ್ತು ಕಮಾಚ್ ರಾಗಗಳಲ್ಲಿ ಇರುವವು.

**Click on Padyas to listen to the audio/ಪದ್ಯಗಳ ಮೇಲೆ ಕುಕ್ಕಿದರೆ ಧ್ವನಿಮುದ್ರಿಕೆ ಕೇಳುತ್ತದೆ**

**1. ಶೃಂಗಾರ**

ಈಗ ಶೃಂಗಾರರಸದ ವಾಚನ ಕಮಾಚ್ ರಾಗದಲ್ಲಿ. ಕವಿ ರನ್ನ ನ ಗದಾಯುಧ್ಧದ 8 ನೇ ಆಶ್ವಾಸದ 50 ನೇ ವೃತ್ತ(ಪದ್ಯ)

ಸ್ಮರ ಸಂಜೀವನೆಕೃಷ್ಣೆಪೂಮುಡಿದಳಾಶ್ರುಂಗಾರಮಾಭಾವಮಾ
ಪರಿಜಾವಿಭ್ರಮಮಾಬೆಡಂಗುನೆಗಳ್ದಾಸೌಂದರ್ಯಮಾ
ಬಿಂಕಮಾತರಳಾಪಾಂಗವಿಲಾಸಮಾಲಟಹಮಾಲಾವಣ್ಯಮಾಪುಣ್ಯಮಾದರಹಾಸಾಮೃತಮೇಂಮನಂಗೊಳಿಸಿತೋಚಾಳು
ಕ್ಯಕಂದರ್ಪನಾ

ಮನ್ಮಥನನ್ನೇ ಬದುಕಿಸತಕ್ಕವಳಾದ ದ್ರೌಪದಿ. ಶೃಂಗಾರ ರಸ ಪೋಷಕ ಸ್ತ್ರೀ ಸಹಜ. ಇದು ವೇಣೀ ಸಂಹಾರ? ಮಂಗಲ ಸೂಚಕವಾದ ಪುಷ್ಪಮಾಲೆಯಿಂದ ತುರುಬನ್ನು ಭೀಮಸೇನ ಅಲಂಕರಿಸುತ್ತಾನೆ. ಇದು ಸ್ವಭಾವೋಕ್ತಿರೂಪಕ ಅಲಂಕಾರ. ಇಲ್ಲಿ ದ್ರೌಪದಿ ಸ್ಮರ ಸಂಜೀವನೆಯಾದರೆ-ಭೀಮಸೇನ ಕಂದರ್ಪ. ಚಾಳುಕ್ಯ ಕಂಠೀರವ ಇಲ್ಲಿ ಚಾಳುಕ್ಯ ಕಂದರ್ಪನಾಗಿದ್ದಾನೆ.

**2. ಹಾಸ್ಯರಸ**

ಹಾಸ ಸ್ಥಿತಿಯಿಂದ ಹಾಸ್ಯರಸದ ಉತ್ಪತ್ತಿ. ಅಂದರೆ ನಗು ನಾಚಿಕೆಗೇಡಿನ ಸ್ವಭಾವ; ವಿಷಯ ಚಾಪಲ್ಯ; ಕುಚೇಷ್ಟೆ; ಕೆಟ್ಟಮಾತು; ಅಂಗವೈಕಲ್ಯ; ದೋಶಾರೋಪಣೆ; ನಾಟಕದ ವಿದೂಷಕನಪಾತ್ರದ ಮಾತುಗಳು;ವಿಚಿತ್ರ ವೇಷ -ಭೂಷಣಗಳು; ಭಾಷೆ; ವಿಕಾರ; ಡಂಭನಡಿಗೆ; ಸಲಿಗೆ ಮಾತು; ಬೆದರುವಿಕೆ; ಅವಿವೇಕದ ನುಡಿ; ಹಾಸ್ಯ; ತಿಳಿನಗೆಯದೃಶ್ಯ; ವಿನೋದದ ಸಮಯ;ಘಳಿಗೆ ಘಳಿಗೆಗೆ ಬಣ್ಣತಿರುಗುವುದು.

ಈಗ ಹಾಸ್ಯರಸದ ಪದ್ಯ ಕುಮಾರವ್ಯಾಸ ಭಾರತದ ಆದಿ ಪರ್ವದ15ನೇ ಸಂಧಿಯ 10ನೇ ಪದ್ಯ ದ್ರೌಪದಿಯ ಸ್ವಯಂವರದಲ್ಲಿ ಬ್ರಾಹ್ಮಣರು ಮತ್ಸ್ಯಯಂತ್ರಭೇಧಿಸಿ ದ್ರೌಪದಿಯನ್ನು ವರಿಸಬಹುದೆಂದು ಡಂಗೂರ ಬಾರಿಸಿದಾಗ ಬ್ರಾಹ್ಮಣರು ತಮ್ಮ ಪಕ್ಕದವರೊಡನೆ ಹಾಸ್ಯ ಮಾಡುತ್ತಿರುವ ದೃಶ್ಯ.

ಏನು ಸಿದ್ದಿಯುಪಾಧ್ಯರೆದ್ದಿರಿ
ದೇನು ಧನುವಿಂಗಲ್ಲಲೇ ತಾ
ನೇನು ಮನದಂಘವಣೆ ಬಯಸಿದಿರೇ ನಿತಂಬಿನಿಯ
ವೈನತೇಯನ ವಿಗಡಿಸಿದ ವಿಷ
ವೇನು ಸದರವೊ ಹಾವಡಿಗರಿಗಿ
ದೇನು ನಮ್ಮುತ್ಸಾಹವೆಂದುದು ಧೂರ್ತ ವಟುನಿಕರ
ಈ ಪದ್ಯಕ್ಕೆ ಮಾಂಡ್ ರಾಗವನ್ನು ಅಳವಡಿಸಲಾಗಿದೆ.

**3. ರೌದ್ರ ರಸ**

ಸ್ಥಾಯಿ ಭಾವ ಕ್ರೋಧ ತಾಮಸ ಪ್ರವೃತ್ತಿಯಿಂದ ರಸ ಉತ್ಪತ್ತಿ. ದರ್ಪ;ತೀಕ್ಷ್ಣ ತೆ;ಖಡುಗದ ತಿವಿತ; ಬಾಣದ ಹೊಡೆತ; ಪಲ್ಗಡಿತ; ರೋಷ; ಸೇಡು; ಮತ್ಸರ; ಕಟುವಚನ; ಅವಮಾನ; ಆಕ್ಷೇಪ; ಕಲಹ; ವಿವಾದ; ಕ್ರೋಧ; ಬೈಗಳು; ಶೌರ್ಯ ಮುಂತಾದುವುಗಳು ಸಂಕೇತಿಸುತ್ತವೆ. ಈಗ ರೌದ್ರರಸಕ್ಕೆ ಪದ್ಯ. ರನ್ನಕವಿಯ ಸಾಹಸ ಭೀಮ ವಿಜಯ ಕಾವ್ಯದಿಂದ 8ನೇ ಆಶ್ವಾಸದ 11ನೇಪದ್ಯ. ರಾಗ ಅಠಾಣ.

ಧಪ್ಪರಿಧಟ್ಟುಂಪೊಟ್ಟೆನೆ
ಧೊಪ್ಪಧೊಗಪ್ಪೆನೆ ದಿಧಿಲ್ ಬುಧಿಲ್ಲೆನೆ ಗದೆಗಳ್
ಸೊಪ್ಪು ಸೊವಡಪ್ಪಿನಂ ಸೂ
ಳ್ತಪ್ಪದೆ ಕಡುಕೆಯ್ದು ಪೊಯ್ದರೊರ್ವರನೊರ್ವರ್.

ಅರ್ಥ
ಭೀಮ ದುರ್ಯೋಧನರು ಗದೆಗಳಿಂದ ಹೊಡೆದುಕೊಳ್ಳುತ್ತಿದ್ದಾಗ ಧಪ್ಪೆಂದೂ ಧಟ್ಟೆಂದೂ ಪೊಟ್ಟೆಂದೂ ಧೊಪ್ಪೆಂದೂ ಧೊಗಪ್ಪೆಂದೂ ದಿಧಿಲ್ ಎಂದೂ ಬುಧಿಲ್ ಎಂದೂ ನಾನಾ ಬಗೆಯ ಶಬ್ದಗಳುಂಟಾಗುತ್ತಿದ್ದವು. ಹೀಗೆ ಕ್ರಮವಾಗಿ ಒಬ್ಬರನ್ನೊಬ್ಬರು ವೀರಾವೇಶದಿಂದ ನಜ್ಜುಗುಜ್ಜಾಗುವತನಕ ಹೊಡೆದುಕೊಂಡರು.

ಮತ್ತೊಂದು ರೌದ್ರ ರಸದಪದ್ಯ ಇದು ಭಾರತದ ಪದ್ಯ. ರಾಗ ಸಿಂಹೇಂದ್ರ ಮಧ್ಯಮ. ಸಭಾಪರ್ವದ 15ನೆಯಸಂಧಿಯ34ನೇ ಪದ್ಯ

ಉರಿವ ಕೋಪಾಗ್ನಿಯಲಿ ಕರ್ಣನ
ಶಿರದಭಾಂಡದಲಿವನ ನೊರೆ ನೆ
ತ್ತರಿನಲಿವನಗ್ರಜನ ಕೊಬ್ಬಿದ ನೆಣನ ಕೊಯ್ಕೊಯ್ದು
ದುರುಳ ಶಕುನಿಯ ಕಾಳಿಜದೊಳೊಡೆ
ವೆರೆಸಿ ಕುದಿಸಿ ಮಹೋಗ್ರಭೂತದ
ನೆರವಿಗುಣಲಿಕ್ಕುವೆನು ಸತಿ ಕೇಳೆಂದನಾಭೀಮ

ಭೀಮಸೇನನ ಉಗ್ರಕೋಪದ ಪ್ರತಿಜ್ಞೆ ಇದು. ಮಧ್ಯಮ ಪಾಂಡವನ ಸಿಂಹನಾದ. ಈ ಎರಡೂ ಪದ್ಯಗಳನ್ನು ಕೇಳಿದಿರಾ ಹೇಗಿದೆ ರೌದ್ರನರ್ತನ? ಗಮಕ ಅಂದ್ರೆ ಎಲ್ಲಾ ರಸಗಳ ರಸಗವಳ. ಸುಮ್ಮನೆ ನಿಯಮಗಳನ್ನು ಓದಿದರೆ ಕೇಳಿದರೆಸಾಲದು. ಹಾಡಿತೋರಿಸಬೇಕು. ಪ್ರಯತ್ನಿಸಿ. ಜಯಶಾಲಿಗಳಾಗುವಿರಿ.

**4. ವೀರ ರಸ**
ವೀರ ರಸ ಭಾರತಕ್ಕೆ ಕರಗಹೊತ್ತ ವೀರ;ಧೀರ ಮಹಿಳೆ ಪಂಜಾಬಿನ ಪಾಂಚಾಲೆ. ವೀರಕ್ಕೆ ಸ್ಥಾಯಿ ಉತ್ಸಾಹ. ಶಕುತಿ;ಯುಕುತಿ;ಬಲ;ಸಮರ;ದಾನವೀರ;ಧರ್ಮವೀರ; ಯುದ್ಧವೀರ ಎಂಬ ಹಲವು ಮುಖಗಳುಂಟು?
ರಸಿಕರಿಗೆ ಸೆಕೆಯುಸಿರನ್ನು ಬರಿಸುವಂಥಹ ಸಂದರ್ಭ.

ಈಗ ಭಾರತದ ಉದ್ಯೋಗ ಪರ್ವದ 6ನೇಸಂಧಿಯ 19ನೇಪದ್ಯ.

ಎಲೆ ಸಮೀರಕುಮಾರ ಸಂಪತ್ತಿ
ಗೆಳಸಿದ್ಯೆ ಕಲಿತನವ ನೀರೊಳು
ಕಲಕಿದ್ಯೆ ಕೈವಾರವಾದುದೆಕೌರವೇಂದ್ರನಲಿ
ಕಲಿಸಿದ್ಯೆಕೃಷ್ಣಂಗೆನೀತಿಯ
ಬಳಸಿದ್ಯೆ ಬಹುಮತವ ನರಕದ
ಳಿಳಿಸಿದ್ಯೆ ಶಶಿಕುಲವನೆಂದನಿಲಜನ ನೋಡಿದಳು.

ಸಂಧರ್ಭ ಗಂಡಂದಿರೆಲ್ಲರೂ ಕೌರವರ ಜೊತೆ ಸಂಧಿಮಾಡಿಕೊಳ್ಳಲು ಸಿದ್ದರಿದ್ದಾರೆ ಎಂಬ ವಿಚಾರ ತಿಳಿದು ಕೃಷ್ಣನ ಆಹ್ವಾನಕ್ಕೆ ಸಭೆಗೆಬರುವಳು. ಬಂದೊಡನೆಯೇ ಗಂಡ ಭೀಮನನ್ನು ಹುರಿದುಂಬಿಸಲು ಆಡಿದ ಕಠೋರ ವಾಕ್ಯವಿದು.
ಇದಕ್ಕೆರಾಗ ಮಲಯ ಮಾರುತ ಕಾರಣ ಸಮೀರ ವಾಯು; ನಂದನ ಪುತ್ರ/ಹಾಗಾಗಿ ಮಾರುತ ಪುತ್ರನನ್ನು ಎಬ್ಬಿಸಲು. ಪಾಂಡವರು ವಿರಾಟ ನಗರಿಯಲ್ಲಿ ಇದ್ದಾಗ ಬೃಹನ್ನಳೆಯಾಗಿರುವ ಅರ್ಜುನನು ಉತ್ತರ ಕುಮಾರನನ್ನು ಕೌರವರ ಪಡೆಯೊಂದಿಗೆ ಯುದ್ಧಮಾಡಲು ಕರೆತರುವನು. ಇದಕ್ಕೆರಾಗ ಚಕ್ರವಾಕ. ರಾಗದಲ್ಲೇ ಅರ್ಥವಿದೆ

**5. ಭಯಾನಕ ರಸ**
ಭಯವೇ ಇದಕ್ಕೆ ಸ್ಥಾಯಿ? ಸರ್ಪದರ್ಶನ;ಭೂತ  ಪಿಶಾಚಿ ಶೂನ್ಯ; ಅರಣ್ಯ ನಿರ್ಜನ; ಅಪಚಾರ; ಬಲುಭಯ; ಗರಹೊಡೆಯುವಿಕೆ ನಡುನಡುಗುವಿಕೆ; ಬೀಳುವಿಕೆ; ಸಂಕಟಪಡುವಿಕೆ; ಪ್ರಾಣಹರಣ; ರಕ್ಷಣೆಇಲ್ಲದಿರುವಿಕೆ. ಇವುಗಳನ್ನು ಕಂಪನ ಧ್ವನಿಯಲ್ಲಿ ಹಾಡಬೇಕು. ಈ ರಸಕ್ಕೆ ಗದುಗಿನ ಭಾರತದ ಪದ್ಯ. ವಿರಾಟಪರ್ವದಲ್ಲಿ ,6ನೇ ಸಂಧಿಯ 5ನೇಪದ್ಯ.

ಕಾಲಕೂಟದ ತೊರೆಯೊಮಾರಿಯ
ಗೂಳೆಯವೊ ಮೃತ್ಯುವಿನ ಗಂಟಲ
ತಾಳಿಗೆಯೊಭೈರವನಥಟ್ಟೋಜವನಜಂಗುಳಿಯೊ
ಕಾಲರುದ್ರನ ನೊಸಲ ವಹ್ನಿ
ಜ್ವಾಲೆಯೋ ಕೌರವನ ಸೇನಾ
ಜಾಲವೋ ಶಿವಯೆನುತ ಹೆದರಿದನಂದು ಸುಕುಮಾರ.

ಪಾಂಡವರು ವಿರಾಟ ನಗರಿಯಲ್ಲಿ ಇದ್ದಾಗ ಬೃಹನ್ನಳೆಯಾಗಿರುವ ಅರ್ಜುನನು ಉತ್ತರ ಕುಮಾರನನ್ನು  ಕೌರವರ ಪಡೆಯೊಂದಿಗೆ ಯುದ್ಧಮಾಡಲು ಕರೆತರುವನು. ಇದಕ್ಕೆರಾಗ ಚಕ್ರವಾಕ. ರಾಗದಲ್ಲೇ ಅರ್ಥವಿದೆ

**6. ಕರುಣ ರಸ**

ಸ್ಥಾಯೀಭಾವ ಶೋಕ ನಷ್ಟಕಾಲ;ಬಂಧುವಿಯೋಗ;;ಕಷ್ಟ;ಶಾಪ;ಮರುಕ;ರೋದನ ಧ್ವನಿ;ಜನರೆದೆ ಕರಗಿಸುವ ಸನ್ನಿವೇಶ. ಇದಕ್ಕೆ ಈಗ ಹಾಡುವ ಪದ್ಯ ಲಕ್ಷ್ಮೀಶ ಕವಿಯ ಜೈಮಿನಿ ಭಾರತದಿಂದ 19ನೇಸಂಧಿಯ 27ನೇಪದ್ಯ.

ಕಡೆಗೆ ಕರುಣಾಳು ರಾಘವನಲ್ಲಿ ತಪ್ಪಿಲ್ಲ
ಕಡುಪಾತಕಂಗೈದು ಪೆಣ್ಣಾಗಿ ಸಂಭವಿಸಿ
ದೊಡಲಂ ಪೊರೆದೆನ್ನೊಳಪರಾಧಮುಂಟು ಸಾಕಿಲ್ಲಿರಲ್ಬೇಡನೀನು
ನಡೆ ಪೋಗು ನಿಲ್ಲದಿರ್ ನಿನಗೆ ಮಾರ್ಗ ದೊಳಾಗ
ಲಡಿಗಡಿಗೆಸುಖಮೆಂದು ಸೀತೆ ಕಂಬನಿಗಳಂ
ಮಿಡಿದಾರ್ತೆಯಾಗಿರಲ್ ಸೌಮಿತ್ರಿ ನುಡಿದನಾ ವಿಪಿನದಭಿಮಾನಿಗಳ್ಗೆ.

ಈ ಪದ್ಯದಲ್ಲಿ ಶೋಕ ಮಡುಗಟ್ಟಿದೆ. ನಮ್ಮಲ್ಲಿ ಒಂದು ಮಾತಿದೆ;ಅಳುವುದಾದರೆ? ಸಾವೇರಿಯಲ್ಲಿಅಳು!!

ಮತ್ತೊಂದು ಕರುಣಾ ರಸಕ್ಕೆ ಪದ್ಯ. ಇದು ನಾರಣಪ್ಪನ ಕರ್ಣಾಟ ಭಾರತ ಕಥಾಮಂಜರಿಯಲ್ಲಿ ಸಭಾಪರ್ವದ 14ನೇಸಂಧಿ 125ನೇಪದ್ಯ

ಕರುಣಿ ನೀ ಕಾರುಣ್ಯಪಾತ್ರದ
ತರಳೆ ತಾ ದೀನಾರ್ತಿದುಃಖೋ
ತ್ತರಣ ನೀ ದೀನಾರ್ತ ದಃಖಿತೆಯಾನು ಜಗವರಿಯೆ
ಪರಮ ಪಾಲಕ ನೀನೆ ಗತ್ಯಂ
ತರಹದ ವಿಹ್ವಲೆ ತಾನಲಾ ನಿ
ಷ್ಠುರವಿದೇನೈ ಕೃಷ್ಣಯೆಂದೊರಲಿದಳು ತರಳಾಕ್ಷಿ

ಇದು ವಿಶೇಷವಾಗಿ ಹಾಡಲಾಗಿದೆ. ಕೃಷ್ಣನನ್ನುಸಂಭೋದಿಸುವಾಗ ಮೇಲಿನ ಸ್ವರ ತನ್ನನ್ನು ತಿಳಿಸುವಾಗ ಕೆಳಗಿನ ಸ್ವರಸ್ಥಾನ. ಇದೇ ವಿಶೇಷತೆ ಹಾಗಾಗಿ ಈ ಪದ್ಯ ಹಾಡಿ ತೋರಿಸಿದೆ.

ಈ ಪದ್ಯ ಶಿವರಂಜನಿ ರಾಗದಲ್ಲಿದೆ.

**7. ಅದ್ಭುತ ರಸ**

ಈಗ ಅದ್ಭುತರಸ ಸ್ಥಾಯಿ-ವಿಸ್ಮಯ;ಚಮತ್ಕಾರ ಹೊಗಳಿಕೆ; ಮಹಿಮೆ;ವರ್ಣನೆ; ಅಹಹ; ಅಹುದು; ಸಹಜಚಿತ್ರಣ; ಅತಿಶಯೋಕ್ತಿ; ಉತ್ಪ್ರೇಕ್ಷೆ. ಇತ್ಯಾದಿ ಪದ್ಯ,ಗದುಗಿನ ಭಾರತದಲ್ಲಿ ಉದ್ಯೋಗ ಪರ್ವದ 9ನೇಸಂಧಿ 62ನೇಪದ್ಯ

ಅರಳಮಳೆ ಸೂಸಿದುವು ದುಂದುಭಿ
ಮೊರೆದುದಾಕಾಶದಲಿ ಮುದದಲಿ
ಧರಣಿ ಬಿದಿರಿತುತನುವನುಕ್ಕಿದುದಬುಧಿ ದೆಸೆದೆಸೆಗೆ
ಕರಿ ಕಮಠರುಬ್ಬಾಳುತನ ಮಿ
ಕ್ಕಿರೆ ಮಹಾದ್ಭಾಭುತವಾಯ್ತು ಕಂಡುದು
ಹರಿಯ ರೂಪವನೊಬ್ಬ ಕೌರವನಲ್ಲದುಳಿದವರು

ಹಸ್ತಿನಾವತಿಯ ಕೌರವನ ಸಭೆಯಲ್ಲಿ ಶ್ರೀ ಕೃಷ್ಣನ ವಿಶ್ವರೂಪದ ವರ್ಣನೆ. ಇದರಲ್ಲಿ ಅದ್ಭುತರಸ ವಿಶೇಷವಾಗಿದೆ. ಇದಕ್ಕೆ ರಾಗ ಬಿಲಹರಿ ಈ ರಾಗದ ವಿಶೇಷತೆ ಹರಿಯದೇ.

**8. ಭೀಭತ್ಸ ರಸ**

ಬೀಭತ್ಸರಸ ಸ್ಥಾಯಿ ಜಿಗುಪ್ಸೆ
ಮನಕೆಬೇಡದ; ತನುವಿಗಾಗದ; ರುಚಿಸದ; ನೋಡಲಾಗದ; ಅನುಚಿತದ;ನೆನೆಯಲಾಗದ ಬೇಸರಧ್ವನಿ-
ತೀವ್ರಗತಿಯಲ್ಲಿ ಹಾಡಬೇಕು. ನೆತ್ತರು; ನಖಕ್ಷತ; ಉಣ್ಮಿದ ಮಿದುಳು, ಇಂತಹ ಪದಗಳಿದ್ದರೆ ಅದು ಬೀಭತ್ಸರಸ.
ಇದಕ್ಕೆಪದ್ಯ ಕನಕದಾಸರಿಂದ ರಚಿತವಾಗಿರುವ

ನಳಚರಿತ್ರೆ ರಾಗ ಬಾಗೇಶ್ರೀ. ನಳಮಹಾರಾಜನನ್ನು ಬೆಂಕಿಯಿಂದ ಹೊರಬಂದ ಕಾರ್ಕೋಟಕ ಸರ್ಪಕಚ್ಚಿದಾಗ ಆದಪರಿಣಾಮ?

ದೊಡ್ಡ ಹೊಟ್ಟೆಯ, ಗೂನುಬೆನ್ನಿನ, ಅಡ್ಡಮೋರೆಯ, ಗಂಟುಮೂಗಿನದೊಡ್ಡಕೈಕಾಲುಗಳ, ಉದುರಿದ ರೋಮ ಮೀಸೆಗಳ, ಜಡ್ಡುದೇಹದ ಗುಜ್ಜುಗೊರಲಿನ. ಗಿಡ್ಡರೂಪದ ಹರಕುಗಡ್ಡದ, ಹೆಡ್ಡನಾದ ಕುರೂಪಿತನದಲಿ ನೃಪತಿ ವಿಷದಿಂದ.

ಈ ಪದ್ಯ ಜಿಗುಪ್ಸೆ ಬರಿಸುತ್ತದೆ.

**9. ಶಾಂತ ರಸ**

ಶಾಂತ ಅಂದರೆ ಸಹನೆ. ತಾಳುವಿಕೆ ಮಾನವನ ಪರಿಪಕ್ವತೆಯನ್ನು ಎತ್ತಿ ತೋರಿಸುವುದು ಶಾಂತ. ಶಾಂತ ರಸ ಮತ್ತು ಭಕ್ತಿರಸದ ಸಂಚಾರಿ ಭಾವ ಒಂದೇ. ಮಾನವ ದುಃಖದಿಂದ ದೂರಾಗುವಾಗ; ಜಗತ್ಪ್ರೇಮದ ಚರಮಾವಸ್ಥೆ ಇದು. ಪ್ರಸನ್ನತೆ-ವೈರಾಗ್ಯ-ನಿರಾಕಾರತೆ-ಪ್ರಶಾಂತತೆ-ಗೌರವ-ಭಕ್ತಿ-ಇವೆಲ್ಲವೂ ಶಾಂತ ರಸಗಳು.

ಶಾಂತರಸಕ್ಕೆಪದ್ಯ ಜೈಮಿನಿಯ 11ನೇ ಸಂಧಿಯ 40ನೇಪದ್ಯ

ಆತಪ್ತ ತೈಲದ ಕಟಾಹದೆಡೆ ಲಿಖಿತಂಗೆ
ಶೀತಳಸ್ಥಳಮಾದುದಾಸುಧನ್ವನಸಂಗ
ಮೇತರತಿಶಯಮೊಹರಿಭಕ್ತರಂಸಾರ್ದಂಗೆತಾಪಮಿರ್ದಪುದೆಬಳಿಕ
ಆತಗಳ್ಕುದಿವೆಣ್ಣೆಯೊಳ್ಸುಖದೊಳಿರೆಹಂಸ

ಕೇತುವಿಸ್ಮಿತನಾಗಿಮಂತ್ರಿಗಳೊಡನೆಬಂದು
ಪ್ರೀತಿಯಿಂದವರೀರ್ವರಂತೆಗಿದುತಕ್ಕೈಸಿದಂಸುತ ಪುರೋಹಿತರನು

ರಾಗ ಶಂಕರಾಭರಣ.
ಪದ್ಯದ ಸಂದರ್ಭ: ಧರ್ಮರಾಯನ ಅಶ್ವಮೇಧದ ಕುದುರೆ ಚಂಪಕಾ ನಗರಿಯ ರಾಜ ಹಂಸಧ್ವಜ ಕಟ್ಟಿದ ಯುದ್ಧಕ್ಕೆ ಎಲ್ಲರನ್ನೂ ಸೇರಿಸಿ ತನ್ನ ಮುದ್ದಿನ ಕುಮಾರ ಸುಧನ್ವನು ತಡವಾಗಿ ಬಂದನೆಂದು ಪುರೋಹಿತ ಲಿಖಿತನ ಮಾತಿನಂತೆ ಶಿಕ್ಷೆ ಕುದಿಯುತ್ತಿರುವ ಎಣ್ಣೆಗೆ ಹಾಕಿಸಿದ ಆದರೆ ಹರಿಯ ನಾಮಾಮೃತದ ಮಹಿಮೆ ಇಂದ ಸುಖವಾಗಿ ಇದ್ದ ಸುಧನ್ವನನ್ನು ಕಂಡು ಪ್ರಾಯಶ್ಚಿತ್ತಕ್ಕಾಗಿ ತಾನೂ ಎಣ್ಣೆ ಕೊಪ್ಪರಿಗೆಗೆ ಬೀಳುವನು ಆ ಸಂಧರ್ಭ ಹೇಗಾಯ್ತು ಎನ್ನುವುದೇ ಈ ಪದ್ಯದ ಅರ್ಥ

**10. ಭಕ್ತಿ ರಸ**

ಈಗ ಭಕ್ತಿಗೆ ಒಂದು ಉದಾಹರಣೆ ದೈವ-ಗುರು-ಹಿರಿಯರು-ಮೊರೆ-ನುತಿ-ನಿರ್ಮಲಭಾವಗರ್ಭಿತಹಾಡು ಇತ್ಯಾದಿ.
ಇದಕ್ಕೆ ಬಹಳ ವಿಶೇಷವಾದ ಪದ್ಯ. ಕಾಗುಣಿತದ ವಾರ್ಧಕಷಟ್ಪದಿ. ಇದನ್ನು ಬಳ್ಳಿಗಳನ್ನೊಳಗೊಂಡ ಪದ್ಯವೆನ್ನುವರು.
ದೇವನೂರಿನ ಲಕ್ಷ್ಮೀಕಾಂತನ ಪರಮ ಆರಾಧಕ ಕವಿನಾದಲೋಲ ಲಕ್ಷ್ಮೀಶ 5ನೇ ಸಂಧಿ 8ನೇ ಪದ್ಯ. ರಾಗ-ರೇವತಿ. 24 ನಕ್ಷತ್ರಗಳಲ್ಲಿ ಕಡೆಯದು  ರೇವತಿ. ರೇವತಿ ಮಳೆ ಸುರಿಯುತ್ತಿರುವಂತೆ ಹರಿಯನಾಮಾವಳಿಗಳ ಸುರಿಮಳೆ. ಇದರಲ್ಲಿ ಕ;ಕಾ;ಕಿ;ಕೀ;ಕು;ಕೂ;;ಕೇ;ಕೈ;ಕೋಕೌ;ಕಂ; ಇಷ್ಟೂ ಆರು ಸಾಲಿನಲ್ಲಿ ಬಳಸಿರುವ ಹೆಗ್ಗಳಿಕೆ. ಕವಿಯದು. ಇನ್ನೂ ಒಂದು ಪದ್ಯ"ಚ"ಅಕ್ಷರದಲ್ಲೂ ಇದೆ.

ಕಮಲದಳ ನಯನ; ಕಾಳಿಯಮಥನ; ಕಿಸಲಯೋಪಮಚರಣ; ಕೀತಪತಿಸೇವ್ಯ; ಕುಜಹರ; ಕೂರ್ಮಸಮಸತ್ಕಪೋಲ; ಕೇಯೂರಧರ; ಕೈರವಶ್ಯಾಮ; ಕೋಕನದಗೃಹೆಯರಮಣ; ಕೌಸ್ತುಭಶೋಭ; ಕಂಬುಚಕ್ರಗದಾಬ್ಜ; ವಿಮಲಕರ; ಕಸ್ತೂರಿಕಾತಿಲಕ; ಕಾವುದೆಂದಮಿತಪ್ರಭಾಮೂರ್ತಿಯಂ ನುತಿಸಲಾತನಂಹರಿನೆಗಪಿದಂ ಕೃಪೆಯೊಳು.

ಸಂಧರ್ಭ ಯೌವನಾಶ್ವರಾಜ ಧರ್ಮರಾಜನ ರಾಜ್ಯಕ್ಕೆ ಬರುತ್ತಾನೆ. ಅಲ್ಲೇ ಕೃಷ್ಣನಿರುತ್ತಾನೆ. ಅವನನ್ನು ನೋಡಿದೊಡನೆ ಯೌವನಾಶ್ವ ಭಗವಂತನ ಗುಣಗಾನವನ್ನು ವಿಶೇಷವಾಗಿ ಮಾಡಿದ ಪದ್ಯವಿದು.

**ನವರಸಗಳ ಪದ್ಯ**

ಈ ವಾರ್ಧಕ ಷಟ್ಪದಿ ಬಹಳ ಅದ್ಭುತವಾಗಿದೆ. ಕಾರಣ ನವರಸಗಳನ್ನೆಲ್ಲಾ ಆರು ಸಾಲಿನಲ್ಲಿ ತಂದಿರುವುದು. ಷಟ್ಪದಿ ಜನಕನೆಂದೇ ಪ್ರಖ್ಯಾತನಾದ ರಾಘವಾಂಕನ ಹರಿಶ್ಚಂದ್ರಕಾವ್ಯ ಈ ಕಾವ್ಯದ 3ನೇ ಆಶ್ವಾಸ 79ನೇ ಪದ್ಯವಿದು. ಇದು ಚಂದ್ರೋದಯ ವರ್ಣನೆ. ಅಮೃತವರ್ಷಿಣಿ ರಾಗಹಾಕಿದೆ. ಕಾರಣ; ಬೆಳದಿಂಗಳು ಅಮೃತ ಬಿಂದುವಿನಂತೆ; ಹಿತ; ತಂಪು ಕೂಡ ಆಪ್ಯಾಯಮಾನ ಎಲ್ಲರಿಗೂ.

ಮೊದಲು ಪೂರ್ತಿ ಪದ್ಯಹಾಡಿ ನಂತರ ಪ್ರತಿ ರಸಕ್ಕೆ ಆಯಾಯ ರಾಗಗಳನ್ನು ಹಾಡಲಾಗಿದೆ. ಒಮ್ಮೆಗೇ 9 ರಸಗಳನ್ನು ಆಸ್ವಾದಿಸಿ.

ಚೋರರ್ಗೆಭಯ; ಚಕ್ರವಾಕಕ್ಕೆ ಕರುಣ; ವರನಾರೀಜನಕ್ಕೆ ಶೃಂಗಾರ; ಕುಸುಮಶರಂಗೆ ವೀರ; ನಕ್ತಂಚರರ ರುಧಿರಪಾನಕ್ಕೆ ಬೀಭತ್ಸ; ಜಲನಿಧಿಗೆ ಅದ್ಭುತ; ಕೈರವಕೆ ಹಾಸ್ಯ; ವಿರಹಾಗ್ನಿಗೆ ಅತಿ ರೌದ್ರಂ; ಚಕೋರ ವ್ರಜಕೆ ಶಾಂತಿ; ರಸದ ಪ್ರವಾಹ ಪ್ರಪೂರವೆನೆನವರಸೋದಯಮಯವೆನಿಸಿದ ಹಿಮಕಿರಣನೆಸೆದಿರ್ದನು

ನವರಸದ ಪದ್ಯದಲ್ಲಿ ಹಾಡಿರುವ ರಾಗಗಳು.
1 ಸಿಂಧುಭೈರವಿ
2 ಚಕ್ರವಾಕ
3 ಕಮಾಚ್
4 ಬೇಗಡೆ

5 ಕೇದಾರಗೌಳ
6 ಅಠಾಣ
7 ಮಾಂಡ್
8 ನಾಟ
9 ಶಂಕರಾಭರಣ
(ಕಡೆಗೆಅಮೃತವರ್ಶಿಣಿ)

6 ಋತುಗಳಲ್ಲಿ ಪ್ರಕೃತಿದೇವಿ ತನ್ನವೈವಿಧ್ಯತೆಯನ್ನು ಬೇರೆಬೇರೆ ರೀತಿಯಲ್ಲಿ ನಮ್ಮ ಮುಂದಿಡುತ್ತಾಳೆ. ಪ್ರಕೃತಿಯಲ್ಲಿ ನವ ಚೈತನ್ಯ ಚಿಲುಮೆ. ಪ್ರತಿ ದಿನವೂ ಬದಲಾವಣೆ ಹೊಂದುತ್ತ ವಿವಿಧ ರೀತಿಯಲ್ಲಿ ಜನರ ಮನಸ್ಸನ್ನು ಸೂರೆಗೊಳ್ಳುತ್ತಾಳೆ. ಅವಳ ಗರ್ಭದಲ್ಲಿ ನವರಸಗಳೂ ಅಡಗಿವೆ. ಅದನ್ನು ಹಾಡಿ-ಹೊಗಳಿ ಕವಿ ಸಾರ್ಥಕತೆಯನ್ನು ಪಡೆಯುತ್ತಾನೆ. ರುತುಗಳರಾಜ ವಸಂತ. ವಸಂತಕಾಲದ ಗಾಳಿ ದಕ್ಷಿಣಾನಿಲ. ವಸಂತ ಒಬ್ಬ ಯೋಧ. ಅವನಿಗೆ ಮಾವಿನ ಚಿಗುರೇ ಬಾಣ. ದುಂಬಿಗಳಸಾಲೇ ಬಿಲ್ಲಿನಂತೆ. ಪ್ರಿಯ-ಪ್ರಿಯೆಯರ ಮನಸ್ಸುಗಳೇ ಲಕ್ಷ್ಯ. ಚಿಗುರಿನ ಮಾಮರದ ಚಿಗುರೆಲೆ ಪ್ರಕೃತಿದೇವಿಗೆ ಚಾಮರ. ದುಂಬಿಗಳ ಝೇಂಕಾರ ಧ್ವನಿಯೇ ಜಯಕಾರ. ವಸಂತಲಕ್ಷ್ಮಿ ಹೂಗಳ ಆಭರಣ ತೊಟ್ಟು. ಮಾವಿನ ಚಿಗುರಿನ ಆಸರೆ ಪಡೆದುದುಂಬಿಗಳ ನೂಪುರ ಧ್ವನಿಗಳ ಮೂಲಕ ಪ್ರವೇಶಿಸುತ್ತಾಳೆ. ಮಲಯಜ ಪವನದಿಂದ ಸ್ಪರ್ಶ. ಕೋಕಿಲಾಲಾಪದಿಂದ ಕರ್ಣ ಸುರಭಿ ಗಂಧದಿಂದನಾಸಿಕ. ದುಂಬಿಗಳಿಂದ ಆವೃತವಾದ ಪುಷ್ಪಗಳಿಂದ ಕಣ್ಣು ಹೀಗೆ ಇಂದ್ರಿಯಗಳಿಗೆ ತಂಪನ್ನೆರೆಯುವ ಶ್ರೇಷ್ಠ ಕಾಲ ವಸಂತ. ಹಾಗಾಗಿ ಈ ಪದ್ಯ "ವಸಂತ"ದಲ್ಲಿ ಹಾಡಬೇಕಲ್ಲವೇ? ಪಂಚೇಂದ್ರಿಯಗಳಿಗೂಈ ಪದ್ಯ ತಂಪನ್ನುಂಟುಮಾಡಲಿ.

ಈಪದ್ಯ ನಾದಲೋಲ ಲಕ್ಷ್ಮೀಶನ ಕನ್ನಡ ಜೈಮಿನಿ ಭಾರತದ8ನೇ ಸಂಧಿ4ನೇಪದ್ಯ. ಲಕ್ಷ್ಮೀಶನವಿಶೇಷವಾದ ರಚನೆ. ಇದನ್ನು"ಯಥಾಸಂಖ್ಯಾಲಂಕಾರ"ಮತ್ತು "ಕ್ರಮಾಲಂಕಾರ" ಜೊತೆಗೆ ಬಳ್ಳಿಗಳನ್ನೊಳಗೊಂಡ ಪದ್ಯವೆಂದೂ ಕರೆಯುವರು. ತುಂಬಾ ಅಪರೂಪದ ರಚನೆ. ಇದನ್ನು ಒಂದು ಪದದ ಜೊತೆಗೆ ಮತ್ತೊಂದು ಮಗದೊಂದನ್ನು ಸೇರಿಸಿಹಾಡಿದೆ. ಕಾರಣ ಮೇಲೆ ಹೇಳಿರುವುದನ್ನು ಗಮನಿಸಿ ಪದ್ಯವನ್ನೂ ನೋಡುತ್ತಾ ಕೇಳಿರಿ.

ಪೊಸಮಾವಶೋಕೆಯೊಳ್ ಮರಿದುಂಬಿ ಕೋಗಿಲೆಯೊಳೆಸೆವ ಸಂಪಿಗೆ ಪೊಚ್ಚಪೊಂದಾವರೆಯೊಳೊಳ್ಪಡಸಿದ ಮಲ್ಲಿಗೆಯಲರ್ ಬೆಳತ ಬೆಳ್ದಿಂಗಳೊಳ್ ಗಿಳಿವಿಂಡು ಬನಸಿರಿಯೊಳುಎಸೆದುವೊಂದೊಂದರೊಳ್ಮಧುಮಾಸಕಂಗಜನ ದೆಸೆಯಂತೆ ಖತಿಯಂತೆಧನದಂತೆ ಜಸದಂತೆ ಪಸುರ್ವೆಳಸಿನಂತೆ ಕೆಂ
ಪಸಿತಂ ಪಳದಿಪಳುಕುಪಚ್ಚೆಗಳಬಣ್ಣದಿಂದೆ.

**ಬಳ್ಳಿಗಳನ್ನೊಳಗೊಂಡ ವಾಚನ**

೨. ಕುಮಾರವ್ಯಾಸನ ಪದ್ಯಗಳೆಲ್ಲವೂ ಮುತ್ತುಗಳೇ ಕೆಲವು ವಜ್ರಗಳಂತೆ. ಅಂತಹ ಪದ್ಯ ಈಗ? ಇದು ಸಭಾಪರ್ವದ 14ನೇ ಸಂಧಿಯ 66ನೇ ಪದ್ಯ. ಇದಕ್ಕೆ ರಾಗ "ಚಾರುಕೇಶಿ". ಕಾರಣ ಹಿಮ್ಮಡಿಗೊಗುವ ಕುಂತಳದಬಲೆ. ಎಷ್ಟು ಪವಿತ್ರವಾದ ಮುಡಿ. ಕೇಳಿ. ಹಾಡುವ ಗಮಕದ ಗಮ್ಮತ್ತು.

ಆಮಹೀಶಕ್ರತುವರದೊಳು
ದ್ದಾಮ ಮುನಿಜನರಚಿತ ಮಂತ್ರ
ಸ್ತೋಮ ಪುಷ್ಕಲ ಪೂತಪುಣ್ಯಜಲಾಭಿಷೇಚನದ
ಶ್ರೀಮುಡಿಗೆ ಕೈಯಿಕ್ಕಿದನು ವರ
ಕಾಮಿನೀನಿಕುರುಂಬವಕಟಕ
ಟಾ ಮಹಾಸತಿ ಶಿವ ಶಿವಾಯೆಂದೊದರಿತಲ್ಲಲ್ಲಿ

ಇಂಥಹ ಪದ್ಯಗಳು ಹಾಡಲು ದೊರೆತಾಗ ಗಮಕಿಯು ವಿಶೇಷಣಗಳನ್ನು ಸೇರಿಸಿ ಹಾಡಿದಾಗ ಕವಿಯ ಪ್ರತಿಭೆಗೆ ನ್ಯಾಯದೊರಕುವುದು

ಈಗ ಅಸ್ತಮಾನದ ಅಂದರೆ ಸಂಧ್ಯೆಯ ಚಿತ್ರಣದ ಪದ್ಯ. ಸಂಧ್ಯಾರಾಗವೆಂದೇ ಪ್ರಖ್ಯಾತವಾಗಿರುವ ಪೂರ್ವಿಕಲ್ಯಾಣಿ ರಾಗದಲ್ಲಿ ಹಾಡಲಾಗಿದೆ. ಈ ಪದ್ಯ ಕವಿ ಮುದ್ದಣನೆಂದೇ ಪ್ರಖ್ಯಾತವಾದ ನಂದಳಿಕೆ ನಾರಣಪ್ಪನ ಶ್ರೀರಾಮ ಪಟ್ಟಾಭಿಷೇಕ ಕಾವ್ಯದ 5ನೇ ಸಂಧಿ 31ನೇಪದ್ಯ. 14ವರ್ಷವನವಾಸ ಮುಗಿಸಿ ಬಂದ ರಾಮನ ಪಟ್ಟಾಭಿಷೇಕಕ್ಕೆ ಸೂರ್ಯನ ಅವಸರದ ಮುಳುಗುವಿಕೆಯ ವರ್ಣನೆ.

ಪದ್ಯ
ನಾಳೆಗೆನ್ನೀಬಳಿಯರಾಯಂಗೆಪಟ್ಟಮೆನು
ತಾಳೋಚಿಸಿರ್ಪರದರಿಂ ಸಮಂ ರಥದೊಳಾ
ವೇಳೆಗೈತಂದು ಸೊಗಸಂ
ಕಾಣಲಕ್ಕುಮೆಂದರಗೀಲ್ಕಳಲ್ಚಿ ಪಿಂದೆ
ಬೀಳಲೋರ್ಗಾಲಿಯಬ್ಧಿಯೊಳದಂ ಪುಡುಕಿ
ತರಲಾಳಿದನೊ ಕಾಣೆನೆಂಬೋಲ್ ಭಾಸ್ಕರಂ
ಬಳಿಕ ಗಾಳಿವಟ್ಟೆಯಿನಿಳಿದು ಕಡಲ ನೀರ್ವುಗೆ ತಾರೆಗಳ್ ತೋರ್ದುವಂಬರದೊಳು.

**ಸೂರ್ಯೋದಯದ ವರ್ಣನೆ.**
ಸಂಜೆ ಸಮುದ್ರದಲ್ಲಿ ಬಿದ್ದ ರವಿ ಮೇಲೆದ್ದು ಬರುವ ಉದಯರವಿಯ ಆತುರ ಕಾತುರದ ಚಿತ್ರಣ. ಇದು ಅದೇ ಕವಿಯ 37ನೇಪದ್ಯ.

ಇನ್ನು ಪೊಳ್ತಾದುದೆಂದೆಳ್ಚರಿಸಲಸವಸದಿ
ಬಿನ್ನಣದ ರಥಕೊಂದೆ ಗಾಲಿಯಂ ಪೂಡಿ ಬದಿ
ಬೆನ್ನಿಗೇಳ್ಗುದುರೆಯಂಕಟ್ಟಿ ಕೆಲಬಲದಿ ಪಾವಿಂ ಬಿಗಿದು
ಸಾರಥಿಯನು ತನ್ನ ಮುಂದಿರಿಸಿ ತಾನಡರಿ ಪೊಡೆಪೊಡೆಯೆಂದು ಸನ್ನೆಗೈದರ್ಯಮಂಪೂರ್ವಾದ್ರಿಯಂ ಪತ್ತಿ
ಸನ್ನುತಮಹಾಭಿಷೇಕವನೀಕ್ಷಿಸಲ್ಕೆಂದು ಬರುತಿರ್ದನಾತುರದೊಳು

**ರಗಳೆಗಳು**

ರಗಳೆ ಎಂದ ಕೂಡಲೆ ಒಂದೇ ಸಮನೆ ಎಲ್ಲಿಯೂ ನಿಲ್ಲಿಸದಂತೆ ಉದ್ದುದ್ದವಾಗಿ ಹಾಡಿಕೊಂಡು ಹೋಗಬೇಕಾದ ಒಂದು ಜಾತಿಯ ಪದ್ಯವೆಂಬ ಅಭಿಪ್ರಾಯವು ಅನೇಕರ ಜ್ಞಾಪಕಕ್ಕೆ ಬಾರದಿರದು. ಸಮವಾದ ಪಾದಗಳಿಂದಲೂ ಮಾತ್ರಾಗಣಗಳಿಂದಲೂ ಕೂಡಿರುವ ಪದ್ಯವೇ"ರಗಳೆ"-ಯನಿಸುವುದು. -ಇದರಲ್ಲಿ ಸಾಲುಗಳು ಅನೇಕ'ನಿಲುಗಡೆಯ ಕೆಲವು ಪಾದಗಳಲ್ಲಿ ಗೊತ್ತಾದ ಮಾತ್ರೆಗಳ ಸಂಖ್ಯೆಯೂ ಕೆಲವು ಮಾತ್ರೆಗಳಿಂದ ಕಡಿಮೆ ಅಥವಾ ಹೆಚ್ಚಾಗಿ ಇರಬಹುದು;ಇದರಲ್ಲಿ ಮೂರು ಬಗೆಯ ರಗಳೆಗಳು ಪ್ರಸಿದ್ಧವಾಗಿವೆ. ಉತ್ಸಾಹ-ಮಂದಾನಿಲ-ಲಲಿತರಗಳೆಗಳು. ಒಂದೊಂದು ಸಾಲನ್ನೇ ಪೂರ್ತಿಯಾಗಿ ಹಾಡಿ ಪಾದದ ಕೊನೆಯಲ್ಲಿ ನಿಲ್ಲಿಸಬೇಕು

**ಸಾಂಗತ್ಯ**

ಇದು ನಾಲ್ಕು ಪಾದಗಳಂದ ಕೂಡಿರುವುದು ಒಂದು ಮತ್ತು ಮೂರನೆಯ ಸಾಲುಗಳಲ್ಲಿ ನಾಲ್ಕು ವಿಷ್ಣು ಗುಣಗಳು ಎರಡು ಮತ್ತು ನಾಲ್ಕನೆಯ ಸಾಲುಗಳಲ್ಲಿ ಎರಡು ವಿಷ್ಣುಗಣವೂಮತ್ತು ಒಂದು ಬ್ರಹ್ಮಗಣವೂ ಇರುವುದುಂಟು. ಲಯಪ್ರಧಾನವಾಗಿ ಹಾಡಬೇಕಾದ ಪದ್ಯದಜಾತಿ. ಸಂಗತಿ ಹಾಕಿ ಹಾಡಬಹುದು ನಾಟಕದಲ್ಲಿ ಮತ್ತು ಮಾತಿನಲ್ಲಿ ಸಂಭಾಷಣೆ ಸಹಜವಾಗಿ ಕೇಳುತ್ತೀವಿ ಆದರೆ ಗಮಕದಲ್ಲಿ? ಹೂ. ಗಮಕದಲ್ಲೂ ಆಗಲ್ವೇ ಸಂಭಾಷಣೆ ಆಗತ್ತೆ. ಯಾಕಾಗಲ್ಲ? ಕೇಳಿ-ಹರಿಶ್ಚಂದ್ರ ಮತ್ತು ವಿಶ್ವಾಮಿತ್ರರ ಸಂಭಾಷಣೆ.

ವಸಿಷ್ಟರ ಜೊತೆ ವಾಗ್ವಾದ ಮಾಡಿದ ವಿಶ್ವಾಮಿತ್ರ ಬೇಟೆಗಾಗಿ ಬರುವಂತೆ ಏರ್ಪಾಡು ಮಾಡಿ ಸಮಸ್ತ ರಾಜ್ಯವನ್ನು ಧಾರೆ ಎರಿಸಿಕೊಂಡು ನಡಿ ಎಲ್ಲರ ಸಮ್ಮುಖದಲ್ಲಿ ರಾಜ್ಯವನ್ನೊಪ್ಪಿಸು ಹತ್ತು ರಥವನ್ನು ಎಂದಾಗ ನಡೆದ ಸಂಭಾಷಣೆ ಇದು.

ನಡೆ ರಥವನೇರಿಕೊಳ್ಳೊಲ್ಲೆನೇಕೊಲ್ಲೆ ಪರ
ರೊಡವೆಯೆನಗಾಗದೇಕಾಗದಾನಿತ್ತೆ ನಿ
ತ್ತದೆ ಕೊಳಲುಬಾರದೇಂಕಾರಣಂ ಬಾರದೆಮಗಂ ಪ್ರತಿಗ್ರಹಸಲ್ಲದು
ಕಡೆಗೆ ನಿನ್ನೊಡವೆಯಲ್ಲವೆಯಲ್ಲವೇಕಲ್ಲವೆಯೇಂದರರೆದಾನಿಗಳಬಲ್ಲಹನು ಮುನಿಯೊಡನೆಸೂಳ್ ನುಡಿಗೊಟ್ಟನು
ಕೊಡದಮುನ್ನೇನ್ನೋಡವೆ ಕೊಟ್ಟ ಬಳಿಕೆನಗೆಲ್ಲಿಯೊಡ

"ನಡೆ ರಥವನೇರಿಕೊಳ್"
"ಒಲ್ಲೆನ್"
"ಏಕೂಲ್ಲೆ"
"ಪರರೊಡವೆಯೆನಗಾಗದು"
"ಏಕಾಗದು"
"ಆನ್ಇತ್ತೆನ್ಇತ್ತಡೆಕೊಳಲು ಬಾರದು"
"ಏಂಕಾರಣಂ"
"ಬಾರದೆಮಗಂಪ್ರತಿಗ್ರಹಸಲ್ಲದು"
"ಕಡೆಗೆ ನಿನೊಡವೆಯಲ್ಲವೆ"
"ಅಲ್ಲವು"
"ಏಕಲ್ಲ"
"ಕೊಡದಮುನ್ನ ಎನ್ನೊಡವೆಕೊಟ್ಟಬಳಿಕೆನಗೆಲ್ಲಿಯೊಡವೆ"
ಎಂದ ಅರರೆ ದಾನಿಗಳಬಲ್ಲಹನು ಮುನಿಯೊಡನೆಸೂಳ್ನುಡಿಗೊಟ್ಟನು

**ಜೋಗುಳದ ಪದ್ಯ**

ಇದನ್ನು ಹಿಂದೆ ಹೇಗೆ ಹಾಡುವ ಧಾಟಿ ಇತ್ತೋ ಹಾಗೇ ಹಾಡಿದೆ. ಪದ್ಯ ವಿರೂಪಾಕ್ಷಪಂಡಿತನ ಚನ್ನಬಸವ ಪುರಾಣದ್ದು ಪಾರ್ವತಿಯನ್ನು ಜೋಗುಳ ಹಾಡ್ತಾ ತೂಗುತ್ತಿರುವ ದೃಷ್ಯ

ರಾಗ ನೀಲಾಂಬರಿ
ಜೋಜೋಶಂಕರನರ್ಧಮಂ ಕವರ್ದುಕೊಳ್ವತ್ಯಂತರೂಪಾನ್ವಿತೇ
ಜೋಜೋಸರ್ವಜಗಚ್ಛಿಶುಪ್ರಕರಮಂರಕ್ಷಿಪ್ಪಮಾತಾಮಹೇ
ಜೋಜೋಶೈವಸಮುದ್ರವರ್ದನಕರಪ್ರಖ್ಯಾತಚಂದ್ರಾನನೆ
ಜೋಜೋರಕ್ಷಿಸೆನುತ್ತತೂಗಿನಲಿದರ್ಶರ್ವಾಣಿಯಂಜಾಣೆಯರ್

## [Navarasa Audio lessons (click here)]